## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ: ರಾಯಚೂರು ಬಳಿಯ ಕಲ್ಮಲಾ ಜಂಕ್ಷನ್ ನಿಂದ ಸಿಂಧನೂರು ಬಳಿಯ ಬಳ್ಳಾರಿ - ಲಿಂಗಸುಗೂರು ರಸ್ತೆ ವೃತ್ತ ವರೆಗಿನ 78.45 ಕಿಮೀ ಉದ್ದದ ರಸ್ತೆಯನ್ನು ಹೈಬ್ರಿಡ್ ವರ್ಷಾಶನ ಯೋಜನೆಯಡಿ (HAM) ಅಭಿವೃದ್ಧಿ ಕಾಮಗಾರಿಯನ್ನು ರೂ.1695.85 ಕೋಟಿಗಳ ಯೋಜನಾ ಮೊತ್ತದಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.**

**ಪ್ರಸ್ತಾವನೆ:**

- ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ಸಿಂಧನೂರು-ರಾಯಚೂರು-ಹೊಸೂರು-ಸಿದ್ದರಾಮ್‌ಪುರ-ಗದ್ದವಾಲ್ ಕ್ರಾಸ್ ರಸ್ತೆ-ಚಂದ್ರಬಂಡ ಕ್ರಾಸ್ ರಸ್ತೆ - ಡಿ ರಾಮ್‌ಪುರ ಕ್ರಾಸ್ ರಸ್ತೆ ಮತ್ತು ಯರಮರಸ್ ನ್ನು ಎನ್.ಹೆಚ್-167 ಕ್ಕೆ ಸಂಪರ್ಕಿಸುವ ರಸ್ತೆಯು ಹೆಚ್ಚಿನ ವಾಹನ ಸಂದ್ರಾತೆಯನ್ನು ಒಳಗೊಂಡಿದ್ದು, ಹೈಬ್ರಿಡ್ ವರ್ಷಾಶನ ಪ್ರಕಾರ (HAM) ಅಭಿವೃದ್ಧಿಗೊಳಿಸಲು ದಿನಾಂಕ:09-06-2021 ರಂದು ಮಾನ್ಯ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಜರುಗಿದ ಪಿಪಿಪಿ ಯೋಜನೆಗಳ 21ನೇ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿಯ ಸಭೆಯಲ್ಲಿ ನಿರ್ಣಯಿಸಲಾಗಿರುತ್ತದೆ.
- ಸದರಿ ರಸ್ತೆ ಕಾಮಗಾರಿಯನ್ನು ಹೈಬ್ರಿಡ್ ವರ್ಷಾಶನ ಮಾದರಿಯಲ್ಲಿ (HAM) ಅಭಿವೃದ್ಧಿಗೊಳಿಸಲು ವಹಿವಾಟು ಸಲಹೆಗಾರರನ್ನಾಗಿ ಹಾಗೂ ಡಿ.ಪಿ.ಆರ್ ತಯಾರಿಸಲು ಸಮಾಲೋಚಕರನ್ನಾಗಿ M/s. Infrastructure Development Corporation (iDeCK) Bangalore ರವರನ್ನು ನೇಮಿಸಲಾಗಿರುತ್ತದೆ.
- ಸಮಾಲೋಚಕರು ತಯಾರಿಸಿದ ಕಾರ್ಯಸಾದ್ಯತಾ ವರದಿಯನ್ನು ದಿನಾಂಕ: 09-03-2022 ರಂದು ನಡೆದ 174ನೇ ತಾಂತ್ರಿಕ ಸಮಿತಿ ಸಭೆಯಲ್ಲಿ ಮಂಡಿಸಲಾಗಿರುತ್ತದೆ. ತಾಂತ್ರಿಕ ಸಮಿತಿಯು ಕಾರ್ಯಸಾದ್ಯತಾ ವರದಿಯನ್ನು ವಿವರವಾಗಿ ಪರಿಶೀಲಿಸಿ, ಯೋಜಿತ ರಸ್ತೆಯನ್ನು ಕಾರ್ಯಸಾದ್ಯತಾ ವರದಿಯಲ್ಲಿನ **ರಾಯಚೂರು ಬಳಿಯ ಕಲ್ಮಲಾ ಜಂಕ್ಷನ್ ನಿಂದ ಸಿಂಧನೂರು** ಬಳಿಯ ಬಳ್ಳಾರಿ-**ಲಿಂಗಸುಗೂರು ರಸ್ತೆ ವೃತ್ತದ ವರೆಗೆ** ರಸ್ತೆಯನ್ನು ಒಟ್ಟು 78.45 ಕಿಮೀ ಉದ್ದಕ್ಕೆ (ವಿನ್ಯಾಸಿತ ಉದ್ದ-77.032 ಕಿಮೀ) ಹೈಬ್ರಿಡ್ ವರ್ಷಾಶನ ಮಾದರಿಯಲ್ಲಿ (HAM) ಅಭಿವೃದ್ಧಿ ಪಡಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಅನುಮೋದಿಸಿರುತ್ತದೆ.
- ತಾಂತ್ರಿಕ ಸಮಿತಿ ಶಿಫಾರಸ್ಸಿನಂತೆ ಕಾರ್ಯಸಾಧ್ಯತಾ ವರದಿಯನ್ನು ದಿನಾಂಕ: 11-03-2022 ರಂದು ನಡೆದ 137 ನೇ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿರ್ದೇಶಕರ ಮಂಡಳಿ ಸಭೆಯಲ್ಲಿ ಮಂಡಿಸಲಾಗಿ ಮಂಡಳಿಯು ವಿವರವಾದ ಚರ್ಚೆಯ ನಂತರ ರಾಯಚೂರು ಬಳಿಯ ಕಲ್ಮಲಾ ಜಂಕ್ಷನ್ ನಿಂದ ಸಿಂಧನೂರು ಬಳಿಯ ಬಳ್ಳಾರಿ-ಲಿಂಗಸುಗೂರು ರಸ್ತೆ ವೃತ್ತ ವರೆಗೆ ರಸ್ತೆಯನ್ನು ಒಟ್ಟು 78.45 ಕಿಮೀ ಉದ್ದಕ್ಕೆ ಹೈಬ್ರಿಡ್ ವರ್ಷಾಶನ ಮಾದರಿಯಲ್ಲಿ (HAM) ಅಭಿವೃದ್ಧಿ ಪಡಿಸಲು ಹಾಗೂ ಅನುದಾನ ಕೋರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಅನುಮೋದಿಸಿರುತ್ತದೆ.

AE-3 Upload in Web VSK 17/10/23

1097 17/10/23

- ಯೋಜನೆಯ ರಸ್ತೆಯನ್ನು SH ಮಾನದಂಡಗಳಿಗೆ ಅನುಗುಣವಾಗಿ ಪರಿಗಣಿಸಿ, ಅದರಂತೆ ಸುಧಾರಣೆಯ ಪ್ರಸ್ತಾವನೆಗಳು ಮುಖ್ಯವಾಗಿ ನಾಲ್ಕು ಲೇನ್ (2x7.5m) ಸುಸಜ್ಜಿತ ಭುಜಗಳು (2x1.5m) ಮತ್ತು ಮಣ್ಣಿನ ಭುಜಗಳು (2x1.5m) ಹಾಗೂ 1.5m ಮಧ್ಯದ ಮೀಡಿಯನ್ ನಿರ್ಮಾಣ ಒಳಗೊಂಡಿರುತ್ತದೆ.

- ಯೋಜನೆಯ ರಸ್ತೆಯ ಆರ್ಥಿಕ ವಿಶ್ಲೇಷಣೆಯನ್ನು (Economic Analysis) ನಿರ್ದಿಷ್ಟ ಅವಧಿಯಲ್ಲಿ ಆರ್ಥಿಕ ಪರಿಭಾಷೆಯಲ್ಲಿ ಉದ್ದೇಶಿತ ಯೋಜನೆಯಿಂದ ಗಳಿಸಿದ ವೆಚ್ಚ ಮತ್ತು ಪ್ರಯೋಜನಗಳನ್ನು ಗಣನೆಗೆ ತೆಗೆದುಕೊಂಡು ಕೈಗೊಳ್ಳಲಾಗಿದೆ. ಯೋಜನಾ ವೆಚ್ಚವು ಅಸ್ತಿತ್ವದಲ್ಲಿರುವ ರಸ್ತೆಯ ಪುನರ್‌ನಿರ್ಮಾಣ/ಹೊಸ ನಿರ್ಮಾಣದಲ್ಲಿ ಆರಂಭಿಕ ಹೂಡಿಕೆ ಮತ್ತು ರಸ್ತೆ ನಿರ್ವಹಣೆಗಾಗಿ ನಿಯತಕಾಲಿಕವಾಗಿ ಮಾಡುವ ವೆಚ್ಚವನ್ನು ಒಳಗೊಂಡಿರುತ್ತದೆ. ಯೋಜನೆಯ ಅನುಷ್ಠಾನದ ಪ್ರಯೋಜನಗಳು ವಾಹನ ನಿರ್ವಹಣಾ ವೆಚ್ಚ (Vehicle Operating Cost) ಮತ್ತು ವಾಹನ ನಿರ್ವಹಣಾ ಸಮಯ (Vehicle Operating Time) ನಲ್ಲಿ ಉಳಿತಾಯವನ್ನು ಒಳಗೊಂಡಿವೆ.

- ಯೋಜನೆಯ ರಸ್ತೆಯ ಉದ್ದಕ್ಕೂ 9 ಪ್ರಮುಖ ಜಂಕ್ಷನ್‌ಗಳು ಮತ್ತು ಹಲವಾರು ಸಣ್ಣ ಜಂಕ್ಷನ್‌ಗಳಿವೆ. ಯೋಜಿತ ರಸ್ತೆ ಸುಧಾರಣೆಯು ಪ್ರಯಾಣಿಸುವ ಪ್ರಯಾಣಿಕರಿಗೆ ಮತ್ತು ವಾಣಿಜ್ಯ ಸಂಚಾರಕ್ಕೆ ಉತ್ತಮ ಮಟ್ಟದ ಸೇವೆಯನ್ನು ಒದಗಿಸುತ್ತದೆ. ಯೋಜನೆ ರಸ್ತೆಯುದ್ದಕ್ಕೂ 146 ಮೋರಿಗಳು, 13 ಸಣ್ಣ ಸೇತುವೆ ಮತ್ತು 7 ಪ್ರಮುಖ ಸೇತುವೆಗಳಿವೆ.

- ಈ ರಸ್ತೆಯು ಮುಖ್ಯವಾಗಿ ಸ್ಥಳಗಳ ನಡುವಿನ ಪ್ರಯಾಣದ ದಟ್ಟಣೆಯನ್ನು ಪೂರೈಸುತ್ತದೆ, ಜೊತೆಗೆ ಕೃಷಿ / ರಸಗೊಬ್ಬರಗಳು / ಕೃಷಿ ಉತ್ಪನ್ನಗಳನ್ನು ಸಾಗಿಸುವ ವಾಹನಗಳ ಚಲನೆಯನ್ನು ಪೂರೈಸುತ್ತದೆ. ಅಸ್ತಿತ್ವದಲ್ಲಿರುವ ರಸ್ತೆಯ ಸುಧಾರಣೆಗಳು ಪ್ರದೇಶದ ಒಟ್ಟಾರೆ ಅಭಿವೃದ್ಧಿಯನ್ನು ಖಚಿತಪಡಿಸುತ್ತದೆ. ಯೋಜನೆ ರಸ್ತೆಯ ಸುಧಾರಣೆಯು ಸಂಪರ್ಕವನ್ನು ಉತ್ತಮಗೊಳಿಸುತ್ತದೆ ಮತ್ತು ಹಲವಾರು ಗ್ರಾಮಗಳು/ವಸಾಹತುಗಳು (1,66,626 ಜನಸಂಖ್ಯೆಯೊಂದಿಗೆ) ಜನರಿಗೆ ಸಾಮಾಜಿಕ ಮತ್ತು ಆರ್ಥಿಕ ಪ್ರಯೋಜನಗಳನ್ನು ಒದಗಿಸುತ್ತದೆ.

- ವಾಹನ ಸಂಚಾರ ಸಮೀಕ್ಷೆಯಂತೆ Annual Average Daily Traffic (AADT) 9709-15565 PCU (6812-14197 ವಾಹನಗಳು) ಇರುತ್ತದೆ.

- ಯೋಜನೆಯನ್ನು ಹೈಬ್ರಿಡ್ ವರ್ಷಾಶನ ಮಾದರಿಯಲ್ಲಿ (HAM) ಅಡಿಯಲ್ಲಿ ಅನುಷ್ಠಾನಕ್ಕೆ ಪ್ರಸ್ತಾಪಿಸಲಾಗಿದೆ. ಸದರಿ ಮಾದರಿಯಲ್ಲಿ, ನಿರ್ಮಾಣ ಅವಧಿಯಲ್ಲಿ ನಿರ್ಮಾಣ ವೆಚ್ಚದ 40% ಅನ್ನು ನಿಗಮವು ಪಾವತಿಸುತ್ತದೆ ಮತ್ತು ಕಾರ್ಯಾಚರಣೆಯ ಅವಧಿಯಲ್ಲಿ ನಿಗದಿತ ವರ್ಷಾಶನವನ್ನು ಪಾವತಿಸಲಾಗುತ್ತದೆ. ರಿಯಾಯಿತಿ ಅವಧಿಯು 15 ವರ್ಷಗಳು (ಮೂರು ವರ್ಷಗಳ ನಿರ್ಮಾಣ ಅವಧಿಯನ್ನು ಒಳಗೊಂಡಂತೆ).

- ಮೇಲ್ಕಂಡಂತೆ, ರೂ.1695.85 ಕೋಟಿ ಯೋಜನಾ ಮೊತ್ತದ ಯೋಜನಾ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಸಂಬಂಧ ವಿಷಯವನ್ನು ದಿನಾಂಕ: 19-08-2023 ರಂದು ಜರುಗಿದ ಸಚಿವ ಸಂಪುಟ ಸಭೆಯಲ್ಲಿ ಮಂಡಿಸಲಾಗಿತ್ತು. ಸಚಿವ ಸಂಪುಟ ಸಭೆಯಲ್ಲಿ ಈ ಕುರಿತು ಚರ್ಚಿಸಿ ಕಾಮಗಾರಿಯ ಅಂದಾಜು ಮೊತ್ತವನ್ನು ಮತ್ತೊಮ್ಮೆ ಪರಿಶೀಲಿಸಲು ಇಲಾಖೆಗೆ ಸೂಚಿಸಿ ನಿರ್ಣಯಿಸಲಾಗಿರುತ್ತದೆ.

**ಅದರಂತೆ, ಪ್ರಸ್ತಾವನೆಯನ್ನು ಪುನರ್ ಪರಿಶೀಲಿಸಿದ್ದು, ಈ ಕೆಳಕಂಡ ಅಂಶಗಳನ್ನು ಪರಿಗಣಿಸಲಾಗಿರುತ್ತದೆ.**

- ಪ್ರಸ್ತಾಪಿತ ರಸ್ತೆಯಲ್ಲಿ ನಾಲ್ಕು ಗಣತಿ ಕೇಂದ್ರಗಳಲ್ಲಿ ಪ್ರತಿ ದಿನದ ಸರಾಸರಿ ವಾಹನ ಸಂಚಾರವು 9709 – 15565 PCUs ಇರುತ್ತದೆ. 15 ವರ್ಷಗಳ ರಿಯಾಯಿತಿ ಅವಧಿ ಮುಗಿದ ನಂತರ, ಅಂದರೆ 2038 ರ ವೇಳೆಗೆ ಪ್ರತಿ ದಿನದ ಸರಾಸರಿ ವಾಹನ ಸಂಚಾರವು 24392 – 38280 PCUs ಎಂದು ಯೋಜಿಸಲಾಗಿರುತ್ತದೆ. ಆದ್ದರಿಂದ, ಸದರಿ ರಸ್ತೆಯನ್ನು 4 ಪಥದ ರಸ್ತೆಯನ್ನಾಗಿ ನಿರ್ಮಿಸಬೇಕಾದ ಅವಶ್ಯಕತೆ ಇರುತ್ತದೆ.

- ಪ್ರಸ್ತಾಪಿತ ಕಾಮಗಾರಿಯ ಮೂಲ ಯೋಜನಾ ಪ್ರಸ್ತಾವನೆಯಂತೆ ಪ್ರತಿ ಕಿ.ಮೀ ರಸ್ತೆ ನಿರ್ಮಾಣ ವೆಚ್ಚವು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವತಿಯಿಂದ ಕರ್ನಾಟಕ ರಾಜ್ಯದಲ್ಲಿ ಇದೇ ತರಹದ ಹೈಬ್ರಿಡ್ ವರ್ಷಾಸನ ಮಾದರಿಯಲ್ಲಿ (HAM) ಕೈಗೊಳ್ಳಲಾಗಿರುವ 4 ಪಥದ ರಸ್ತೆ ನಿರ್ಮಾಣ ಯೋಜನೆಗಳ ಪ್ರತಿ ಕಿ.ಮೀ ರಸ್ತೆ ನಿರ್ಮಾಣ ವೆಚ್ಚಕ್ಕಿಂತ ಕಡಿಮೆಯಿರುತ್ತದೆ.

  ಮುಂದುವರೆದು, ಈ ಕೆಳಕಂಡ ಅಂಶಗಳನ್ನು ಪರಿಗಣಿಸಬೇಕಾದ ಅವಶ್ಯಕತೆ ಇರುತ್ತದೆ.

  1. It is advisable to adhere to the provisions of IRC:SP:84-2019 – "Manual of specifications & standards for four laning of highways", so that it is compatible with the MCA for HAM projects (as finalized as standard document by the Planning Commission, GoI).
  2. Non-adherence to the provisions of IRC:SP:84-2019 and relevant circulars may be objectionable by the users and stakeholders, including the toll paying traffic, once the project road becomes a toll road after implementation.
  3. This design life and Concession period remain identical as 15 years, which is essence of HAM project.

- ಪ್ರಸ್ತಾಪಿತ ರಸ್ತೆ ಭಾಗವನ್ನು ಈ ಹಿಂದೆ 2002-2006 ರ ಅವಧಿಯಲ್ಲಿ ಕೆಶಿಪ್-1 ರಡಿಯಲ್ಲಿ ನಿರ್ಮಿಸಲಾಗಿದ್ದು, ಪ್ರಸ್ತುತ ರಸ್ತೆಯ ವಿನ್ಯಾಸಿತ ಜೀವಿತಾವಧಿಯು ಪೂರ್ಣಗೊಂಡಿರುತ್ತದೆ.

ಮೇಲ್ಕಂಡ ಪರಿಗಣಿತ ಅಂಶಗಳನ್ವಯ ರೂ.1695.85 ಕೋಟಿ ಯೋಜನಾ ಮೊತ್ತದ ಮೂಲ ಯೋಜನಾ ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಸಂಬಂಧ ವಿಷಯವನ್ನು ದಿನಾಂಕ:22-09-2023 ರಂದು ಜರುಗಿದ ಸಚಿವ ಸಂಪುಟ ಸಭೆಯಲ್ಲಿ ಮಂಡಿಸಲಾಗಿತ್ತು. ಸಚಿವ ಸಂಪುಟ ಸಭೆಯು ಪ್ರಸ್ತಾವನೆಯನ್ನು ಪರಿಶೀಲಿಸಿ ಅನುಮೋದಿಸಿರುತ್ತದೆ.

• ಯೋಜನಾ ಪ್ರಸ್ತಾವನೆಯಂತೆ ಯೋಜನೆಯ ಪ್ರಮುಖ ಅಂಶಗಳು ಈ ಕೆಳಕಂಡಂತಿವೆ:

| Sl. No. | Description | Detail |
|---|---|---|
| 1 | Road section | **Raichuru** (near Kalmala Junction) **to Sindhanoor** (near Bellary-Lingasugur road circle) |
| 2 | Road length | 78.45km (design length –77.032km) |
| 3 | Lane configuration | 4 Lane |
| 4 | Concession period | Construction period – 3 yrs<br>Maintenance period – 12 yrs<br>Total period – 15yrs |
| 5 | Construction cost | Rs .1124.03 Crore (incl GST) |
| 6 | Other costs – Contingency, Price Escalation, Insurance, Interest, Financing Cost, Preoperative Expense | Rs. 360.00 Crore |
| 7 | Total Landed Project Cost | Rs. 1484.03 Crore |
| 8 | Non Civil Works Cost – DPR & IE Charges, LA and R&R, Utility relocation | Rs. 211.82 Crore |
| 9 | Total project cost | Rs. 1695.85 Crore |
| 10 | Construction cost per Km | Rs. 14.59 Crore |
| 11 | Initial investment for the Authority during construction | Rs. 449.61 Crore (Incl. GST)<br>(40% of construction cost) |
| 12 | Hybrid Annuity cost @ 15% Equity IRR | Rs. 241.23 Crore per year (for 12 years) |
| 13 | Project facilities | Bus bays - 30 nos<br>Truck Lay byes – 4 nos<br>Major bridges – 7 nos<br>Minor bridges - 13 nos<br>Junction improvements - 32 nos<br>RCC drain in settlement locations – 18.5 km on either side |

ಭಾರತ ಸರ್ಕಾರದ ಪತ್ರ ಸಂಖ್ಯೆ. F.No. 44(1)/PF-S/2023-24 (CAPEX), Ministry of Finance, Department of Expenditure, Public Finance-States Division, North Block, New Delhi, dated 26-05-2023 ರಲ್ಲಿ ಸದರಿ ಯೋಜನೆಗೆ Capital Expenditure under Part-1 of the scheme for special assistance to states for capital investment for 2023-24 ಅಡಿಯಲ್ಲಿ ಕ್ರಮ ಸಂಖ್ಯೆ. 4 ರಲ್ಲಿ ಅನುಮೋದನೆ ನೀಡಲಾಗಿರುತ್ತದೆ ಹಾಗೂ ಪ್ರಸಕ್ತ 2023–24ನೇ ಸಾಲಿಗೆ ಕೇಂದ್ರ ಸರ್ಕಾರದ ರೂ.250.00 ಕೋಟಿಗಳ ಅನುದಾನವನ್ನು ಈ ಯೋಜನೆಗೆ ಕಾಯ್ದಿರಿಸಲಾಗಿದೆ.

ಮೇಲಿನ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕುಶವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಲೋಇ ಇ-325 ಇಎಪಿ 2021, ಬೆಂಗಳೂರು, ದಿನಾಂಕ:09-10-2023**

1. ರಾಯಚೂರು ಬಳಿಯ ಕಲ್ಮಲಾ ಜಂಕ್ಷನ್ ನಿಂದ ಸಿಂಧನೂರು ಬಳಿಯ ಬಳ್ಳಾರಿ- ಲಿಂಗಸುಗೂರು ರಸ್ತೆ ವೃತ್ತ ವರೆಗಿನ 78.45 ಕಿಮೀ ಉದ್ದದ ರಸ್ತೆಯನ್ನು ಹೈಬ್ರಿಡ್ ವರ್ಷಾಶನ ಯೋಜನೆಯಡಿ (HAM) ರೂ.1695.85 ಕೋಟಿಗಳ ಯೋಜನಾ ಮೊತ್ತದಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.
2. ಕರಡು ಟೆಂಡರ್ ದಸ್ತಾವೇಜು (Draft Tender Document) ಗೆ ಆರ್ಥಿಕ ಇಲಾಖೆಯಿಂದ ತೀರುವಳಿ ಪಡೆದು ಟೆಂಡರ್ ಪ್ರಕ್ರಿಯೆ ಕೈಗೊಳ್ಳತಕ್ಕದ್ದು.
3. ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ:ಆಇ/228/ಆಕೋ-2/2022, ದಿನಾಂಕ:05-06-2023 ಹಾಗೂ ಸಂಖ್ಯೆ:ಆಇ 228 ಆಕೋ-2/2023 ದಿನಾಂಕ:19-09-2023 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಹರ್ಷ ಬಿ.ಎಂ) 09/10/2023
ಸರ್ಕಾರದ ಅಧೀನ ಕಾರ್ಯದರ್ಶಿ (ಇಎಪಿ)
ಲೋಕೋಪಯೋಗಿ ಇಲಾಖೆ

ಗೆ,
ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಲು.

ಪ್ರತಿಯನ್ನು :-
1. ಮಹಾಲೇಖಪಾಲರು (ಅಕೌಂಟ್ಸ್) ಕರ್ನಾಟಕ, ಬೆಂಗಳೂರು.
2. ಸನ್ಮಾನ್ಯ ಮುಖ್ಯ ಮಂತ್ರಿಯವರ ಅಪರ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಮಾನ್ಯ ಲೋಕೋಪಯೋಗಿ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ ರವರಿಗೆ ಮಾನ್ಯ ಲೋಕೋಪಯೋಗಿ ಸಚಿವರ ಗಮನಕ್ಕೆ ತರಲು.
4. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
7. ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.

8. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕರ್ನಾಟಕ ರಾಜ್ಯ ರಸ್ತೆ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.
9. ಸರ್ಕಾರದ ಜಂಟಿ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ, ವಿಧಾನ ಸೌಧ, ಬೆಂಗಳೂರು ರವರಿಗೆ ಸಚಿವ ಸಂಪುಟ ಟಿಪ್ಪಣಿ ಸಂಖ್ಯೆ:ಸಿ.472/2023, ದಿನಾಂಕ:22-09-2023 ರನ್ವಯ ಹೊರಡಿಸಿ ಸಲ್ಲಿಸಲಾಗಿದೆ.
10. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ, (ಆರ್ಥಿಕ ಕೋಶ) ಲೋಕೋಪಯೋಗಿ ಇಲಾಖೆ, ವಿಧಾನಸೌಧ, ಬೆಂಗಳೂರು.
11. ಆಂತರಿಕ ಆರ್ಥಿಕ ಸಲಹೆಗಾರರು, ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
12. ಸರ್ಕಾರದ ಉಪಕಾರ್ಯದರ್ಶಿ, (ಸಂ ಮತ್ತು ಕ), ಲೋಕೋಪಯೋಗಿ ಇಲಾಖೆ, ವಿಕಾಸಸೌಧ, ಬೆಂಗಳೂರು.
13. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.
14. ಪ್ರಧಾನ ಇಂಜಿನಿಯರ್, PRAMC, ಲೋಕೋಪಯೋಗಿ ಇಲಾಖೆ, ಕೆ.ಆರ್ ವೃತ್ತ, ಬೆಂಗಳೂರು ರವರಿಗೆ ವೆಬ್ ಸೈಟ್ ನಲ್ಲಿ ಪ್ರಕಟಿಸಲು.
15. ಕಡತ / ಹೆಚ್ಚುವರಿ ಪ್ರತಿಗಳು.